**ದಿನಾಂಕಃ 08-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್.ಎ.ವೈ ವಕೀಲರಿಂದಃ**

**18.** ನನ್ನ ಜಮೀನಿನಲ್ಲಿ ತೋರಿಸಿರುವ 5 ಗುಂಟೆ ಖರಾಬು ಅಂದರೆ ಈ ದಾವೆಯಲ್ಲಿ ತೋರಿಸಿದ ರಸ್ತೆ ಎಂದರೆ ಸರಿಯಲ್ಲ. ನನ್ನ ಜಮೀನಿನ 16 ಎಕರೆ 5 ಗುಂಟೆ ಜಮೀನಿನಲ್ಲಿ 5 ಗುಂಟೆ ಖರಾಬು ಜಮೀನನ್ನು ಬಿಟ್ಟು ಯಾವುದೇ ಬೇರೆ ಖರಾಬು ಜಮೀನು ಇಲ್ಲ ಎಂದರೆ ಸರಿ. ನಿಪಿ-8 ಮತ್ತು 9 ರಲ್ಲಿ ತೋರಿಸಿರುವ ಕಚ್ಚಾ ರಸ್ತೆ ನನ್ನ ಜಮೀನಿಗಿಂತ ಮುಂಚೆ ಬರುವ ಕಚ್ಚಾ ರಸ್ತೆ ಎಂದರೆ ಸರಿ. ನಿಪಿ-11 ರಲ್ಲಿ ಕಾಣಿಸುತ್ತಿರುವ ಕಾಂಪೌಂಡ್ ಸರ್ಕಾರಿ ಹೈಸ್ಕೂಲಗೆ ಸೇರಿದ ಕಾಂಪೌಂಡ್ ಎಂದರೆ ಸರಿ. ನಿಪಿ-11 ರಲ್ಲಿ ಕಾಣಿಸುತ್ತಿರುವ ಕಾಂಪೌಂಡನ ಎಡಬದಿಯಲ್ಲಿರುವ ಕಚ್ಚಾ ರಸ್ತೆ ನನ್ನ ಜಮೀನಿನ ಮುಂಚೆ ಬರುವ ಕಚ್ಚಾ ರಸ್ತೆ ಎಂದರೆ ಸಾಕ್ಷಿಯು ಸರಿ, ಆದರೆ ಸದರಿ ರಸ್ತೆ ಈ ದಾವೆಯನ್ನು ಹಾಕುವ ಸಮಯದಲ್ಲಿ ಇರಲಿಲ್ಲ. ಆದರೆ ನಂತರ ಪ್ರತಿವಾದಿಗಳು ರಸ್ತೆ ಎಂದು ಬಳಸಿದ್ದರಿಂದ ನಾನು ಅವರ ವಿರುದ್ದ ನ್ಯಾಯಾಲಯದ ಆದೇಶದ ನಿಂದನೆ ಪ್ರಕರಣ ದಾಖಲಿಸಿದ್ದೇನೆ. ಅದೇ ರೀತಿ ನಿಪಿ-12 ರಲ್ಲಿ ಕಾಣಿಸುತ್ತಿರುವ ಕಚ್ಚಾ ರಸ್ತೆಯೂ ಕೂಡ ನನ್ನ ಜಮೀನಿಗಿಂತ ಮುಂಚೆ ಇರುವ ರಸ್ತೆಯಾಗಿದ್ದು ಅದು ಕೂಡಾ ಈ ದಾವೆಯನ್ನು ಸಲ್ಲಿಸುವಾಗ ಇರಲಿಲ್ಲ. ನಿಪಿ-11 ಮತ್ತು 12 ನ್ನು ಯಾವಾಗ ತೆಗೆದಿದೆ ಎಂದು ನಿಗದಿತವಾಗಿ ನೆನಪಿಲ್ಲ, ನಾನು ಸಿ.ಡಿ ಯನ್ನು ಹಾಕಿದ್ದೇನೆ.

**19.** ನಿಪಿ-13 ರಲ್ಲಿ ಕಾಣುತ್ತಿರುವ ಕಚ್ಚಾ ರಸ್ತೆ ಮತ್ತು ಸೀಮೆ ಕಲ್ಲಿನಿಂದ ಉತ್ತರಕ್ಕೆ ಇರುವ ಜಮೀನು ನನ್ನದು ಎಂದರೆ ಸರಿ. ನಿಪಿ-14 ರಲ್ಲಿ ಕಾಣುತ್ತಿರುವ ರಸ್ತೆ ನನ್ನ ಜಮೀನಿನ ಮುಂಚೆ ಇರುವ ಕಚ್ಚಾ ರಸ್ತೆ ಎಂದರೆ ಸರಿ, ಅದು ದಾವೆಯನ್ನು ಹಾಕುವ ಸಮಯದಲ್ಲಿ ಇರಲಿಲ್ಲ. ನಿಪಿ-

13 ರಲ್ಲಿ ಕಾಣುತ್ತಿರುವ ರಸ್ತೆ ಟ್ರ್ಯಾಕ್ಟರ, ಎತ್ತಿನ ಗಾಡಿ ಮತ್ತು ಜೆ.ಸಿ.ಬಿ ಹಾದುಹೋಗುವಂತೆ ಅಂದಾಜು 8 ರಿಂದ 8 ವರೆ ಫೂಟ್ ಅಗಲದ ರಸ್ತೆ ಎಂದರೆ ಸಾಕ್ಷಿಯು ಈ ದಾವೆಯನ್ನು ಸಲ್ಲಿಸುವ ಮುನ್ನ ಅದು ಕೇವಲ ಕಾಲುದಾರಿಯಾಗಿತ್ತು, ಆದರೆ 2016 ರಿಂದ ಪ್ರತಿವಾದಿಗಳು ಅದನ್ನು ನ್ಯಾಯಾಂಗ ಆದೇಶದ ವಿರುದ್ದ ಬಳಸಿದ್ದರಿಂದ ಈಗ ರಸ್ತೆ ಕಾಲುದಾರಿಯಾಗಿ ಉಳಿದಿರುವುದಿಲ್ಲ.

**20.** ನನ್ನ ಜಮೀನಿನಲ್ಲಿ ಹಾದುಹೋಗಿರುವ ರಸ್ತೆ ನನ್ನ ಮಾಲ್ಕಿ ಕಬ್ಜಾದಲ್ಲಿರದ ರಸ್ತೆ ಎಂದರೆ ಸಾಕ್ಷಿಯ ಅದು ಕೇವಲ ಕಾಲುದಾರಿಯಾಗಿರುತ್ತದೆ ಅದು ಬಂಡಿ ದಾರಿಯಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಕೋರ್ಟ ಕಮಿಷನರ ಹಾಕಿದ ವರದಿ ತಪ್ಪಾಗಿದ್ದು ಅದನ್ನು ನಾನೇ ಕೋರ್ಟ ಕಮಿಷನರವರೊಂದಿಗೆ ಶಾಮೀಲಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೋರ್ಟ ಕಮಿಷನರ ವರದಿಯಲ್ಲಿ ತೋರಿಸಿರುವಂತೆ ಯಾವುದೇ ರಸ್ತೆಗಳು ವಸ್ತು ಸ್ಥಿತಿಯಲ್ಲಿಲ್ಲ ಎಂದರೆ ಸರಿಯಲ್ಲ. ನಿಪಿ-8,9,11,12,13 ಮತ್ತು 14 ರಲ್ಲಿ ಕಾಣಿಸುತ್ತಿರುವ ರಸ್ತೆಗಳು ಬಹಳ ವರ್ಷಗಳಿಂದ ಬಂಡಿ ದಾರಿಯಾಗಿ ಬಳಸಿದ ಕಚ್ಚಾ ರಸ್ತೆಗಳಾಗಿರುತ್ತವೆ, ನಾನು ಹೇಳಿದಂತೆ 2016 ರಿಂದ ಆಗಿದೆ ಎಂದರೆ ಸರಿಯಲ್ಲ.

**21.** ನಿಪಿ-3,4 ಮತ್ತು 5 ನಲ್ಲಿ ಕಾಣುತ್ತಿರುವ ಜಮೀನು ನನ್ನ ಜಮೀನು ಅಲ್ಲ ಎಂರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ-3,4,5 ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ಜಮೀನಿನ ವಸ್ತು ಸ್ಥಿತಿಯನ್ನು ತೋರಿಸುವ ಛಾಯಚಿತ್ರಗಳಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಜಮೀನಿನಲ್ಲಿ ಬಂಡಿ ದಾರಿಯಿದ್ದರೂ ಅದನ್ನು ಕಾಲುದಾರಿ

ಎಂದು ಸುಳ್ಳು ಹೇಳಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,**
**ಬಸವನ ಬಾಗೇವಾಡಿ.**